ಹೊಸ ದಿಗಂತ
22.08.2016

# ರಾಜ್ಯಕ್ಕೆ ಪ್ರತಿಷ್ಠಿತ ಡಿಎಲ್ ಶಾ- ಪ್ಲಾಟಿನಂ ಪ್ರಶಸ್ತಿ




ಬೆಂಗಳೂರು: ರಾಜ್ಯದ ಮಾದರಿ ಆನ್ ಲೈನ್ ಕೃಷಿ ಮಾರುಕಟ್ಟೆ ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾದ ಪ್ರತಿಷ್ಠಿತ ಡಿಎಲ್ ಶಾ- ಪ್ಲಾಟಿನಂ ಪ್ರಶಸ್ತಿಯನ್ನು ವಿಮಾನಯಾನ ರಾಜ್ಯ ಖಾತೆ ಸಚಿವ ಜಯಂತ್ ಸಿನ್ಹ ಅವರು ರಾಜ್ಯ ಸರ್ಕಾರದ ಅಪರ ಕಾರ್ಯದರ್ಶಿ ಮನೋಜ್ ರಾಜನ್ ಅವರಿಗೆ ನವದೆಹಲಿಯಲ್ಲಿ ನಡೆದ 11ನೇ ನ್ಯಾಷನಲ್ ಕ್ವಾಲಿಟಿ ಕಾನ್ ಕ್ಲೇವ್ ಸಮಾರಂಭದಲ್ಲಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಪರ ಕಾರ್ಯದರ್ಶಿ ಮನೋಜ್ ರಾಜನ್, ಕೃಷಿ ಮಾರುಕಟ್ಟೆಯಲ್ಲಿ ಪಾರದರ್ಶಕತೆ ಹಾಗೂ ದಕ್ಷತೆ ಮತ್ತು ಸರಳತೆಯನ್ನು ತರುವ ಉದ್ದೇಶದಿಂದ ಆನ್ ಲೈನ ಮಾರುಕಟ್ಟೆಯನ್ನು ಆರಂಭಿಸಲಾಗಿದೆ. ಇದರಿಂದ ರೈತರು ತಮ್ಮ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಮಾರಾಟ ಮಾಡಬಹುದಾಗಿದೆ. ಅಲ್ಲದೇ ಉತ್ಪನ್ನಗಳ ಬೆಲೆಯನ್ನು ಆನ್‌ಲೈನ್ ನಲ್ಲಿ ಪ್ರಕಟಪಡಿಸಲಾಗುವುದರಿಂದ ಖರೀದಿ ಮಾಡುವವರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಪ್ರಸ್ತುತ ರಾಜ್ಯದ 157 ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ 142 ಮಾರುಕಟ್ಟೆಗಳಲ್ಲಿ ಆನ್ ಲೈನ್ ಮೂಲಕ ವ್ಯಾಪಾರ ವಹಿವಾಟು ನಡೆಸಲಾಗುತ್ತಿದೆ.

ಕೃಷಿ ಉತ್ಪನ್ನ ಕ್ಷೇತ್ರಕ್ಕೆ ಅನುಕೂಲವಾಗುವ ರೀತಿಯಲ್ಲಿ ಆನ್ ಲೈನ್ ವ್ಯಾಪಾರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈವರೆಗೆ 26 ಸಾವಿರ ಕೋಟಿ ರೂಪಾಯಿಗಳು ಆನ್‌ಲೈನ್ ಮೂಲಕ ವ್ಯಾಪಾರ ನಡೆದಿದೆ. 25 ಸಾವಿರ ರೈತರು ಆನ್ ಲೈನ್ ಮರುಕಟ್ಟೆ ವ್ಯಾಪ್ತಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಇದು ದೇಶದಲ್ಲೇ ಮಾದರಿಯಾದ ವ್ಯವಸ್ಥೆಯಾಗಿದೆ ಎಂದು ತಿಳಿಸಿದರು.